ಅದರ ಹಳದಿ ಕೆಂಪು ವರ್ಣದ ಬೆಳಕಿನಿಂದಾಗಿ ಆ ಕೋಣೆ ಪ್ರಜ್ವಲಿಸುತ್ತಿತ್ತು. ಅಗ್ಗಿಷ್ಟಿಕೆಯ ಮುಂದೆ ಬೆಂಕಿ ಕಾಯಿಸುತ್ತಾ ಒಂದು ಡ್ಯಾಷುಂಡ್ ಜಾತಿಯ ನಾಯಿ ಮೂತಿಯನ್ನು ಹೊಕ್ಕಳಿಗೆ ಆನಿಸಿ ನೆಲಕ್ಕೆ ಹಾಸಿದ್ದ ಕಾರ್ಪೆಟ್‌ನ ಮೇಲೆ ಇಹಲೋಕದ ಪರಿವೆಯಿಲ್ಲದಂತೆ ಮಲಗಿತ್ತು. ಆ ಕೋಣೆಯಲ್ಲಿ ಒಂದು ಹಿತವಾದ ನೆಮ್ಮದಿ ಇರುವಂತೆ ಬಿಲ್ಲಿ ವೀವರನಿಗೆ ಭಾಸವಾಯಿತು. ಆ ವಿಶಾಲವಾದ ಕೋಣೆಯಲ್ಲಿ ಒಂದು ಗ್ರ್ಯಾಂಡ್ ಬೇಬಿ ಪಿಯಾನೊ, ಒಂದು ದೊಡ್ಡ ಸೋಫಾ ಸೆಟ್, ನಾಲ್ಕೈದು ಮೆತ್ತನೆಯ ಹಾಸಿನ ಕುರ್ಚಿಗಳು ಹಾಗೂ ಒಂದು ಮೂಲೆಯಲ್ಲಿ ಪಂಜರದೊಳಗಿದ್ದ ಗಿಣಿಯೂ ಅವನಿಗೆ ಕಾಣಿಸಿತು. ಇಂತಹ ಮನೆಗಳಲ್ಲಿ ಪ್ರಾಣಿ ಪಕ್ಷಿಗಳು ವಿಶೇಷ ಮೆರುಗು ನೀಡುತ್ತವೆಂದು ಅವನಿಗನ್ನಿಸಿತು. 'ಬೆಲ್ಲ್ ಆಂಡ್ ಡ್ರ್ಯಾಗನ್' ಹೋಟಲಿನ ವಾಸ್ತವ್ಯಕ್ಕಿಂತಲೂ ಇಲ್ಲೇ ಪರವಾ ಇಲ್ಲ ಅಂತ ಅವನಿಗೆ ಅನಿಸತೊಡಗಿತು.

ಈ ಥರದ ಜಾಗಗಳಿಗೆ ಬೋರ್ಡಿಂಗ್ ಎಂದು ಕರೆಯಲಾಗುತ್ತಿತ್ತು. ಇದು ಬಿಲ್ಲಿ ವೀವರನಿಗೆ ಹೊಸ ಅನುಭವ. ಅವನು ಪಬ್ಬುಗಳಲ್ಲಿ ಉಳಿದುಕೊಂಡಿದ್ದ. ಅಲ್ಲಿ, ಸಂಜೆಗಳನ್ನು ಕಳೆಯಲು ಬಿಯರ್, ಡಾರ್ಟ್ ಆಟ ಇಲ್ಲಾ ಹರಟೆ ಹೊಡೆಯಲು ಬೇಕಾದಷ್ಟು ಜನ ಸಿಗುತ್ತಿದ್ದರು. ಬೋರ್ಡಿಂಗುಗಳೆಂದರೆ, ಅವುಗಳನ್ನು ನಡೆಸುವ ಜಿಪುಣ ಮುದುಕಿಯರು, ಎಲೆಕೋಸು, ಒಣ ಮೀನಿನ ಚಿತ್ರಣ ಅವನ ಮನೋಪಟಲದ ಮೇಲೆ ಮೂಡಿತು. ಮೊದಲು ಹೋಟೆಲು ಹೇಗಿದೆ ಎಂದು ನೋಡಿ, ಇಷ್ಟವಾಗದಿದ್ದಲ್ಲಿ ಇಲ್ಲಿಗೆ ಬರುವುದೆಂದು ಬಿಲ್ಲಿ ನಿರ್ಧರಿಸಿದ. ಅವನು ಅಲ್ಲಿಂದ ಕಳಗಿಳಿಯಲು ತಿರುಗುತ್ತಿದ್ದಂತೆಯೇ, '...ಇಲ್ಲಿ ಬೆಳಗಿನ ಉಪಹಾರದ ವ್ಯವಸ್ಥೆಯೂ ಇದೆ' ಎನ್ನುವ ಫಲಕ ಅವನನ್ನು ಮೋಡಿ ಮಾಡಿತು. ಮುಂದಕ್ಕೆ ಹೋಗಲು ಅವನಿಗೆ ಕಾಲುಗಳನ್ನು ಕೀಳಲಾಗಲಿಲ್ಲ. ಯಾವುದೋ ಮಾಂತ್ರಿಕ ಶಕ್ತಿಗೆ ಒಳಗಾದಂತೆ ಅವನು ಬಾಗಿಲ ಪಕ್ಕದಲ್ಲಿದ್ದ ಕರೆಗಂಟೆಯನ್ನು ಒತ್ತಲು ಕೈ ಎತ್ತಿದ.

ಅವನು ಕರೆಗಂಟೆಯನ್ನು ಒತ್ತಿದ. ಒಳಗೆ ಎಲ್ಲೋ ಆಳದಲ್ಲಿ ಅವನಿಗೆ ಕರೆಗಂಟೆಯ ಶಬ್ದ ಮೊಳಗಿದ್ದು ಕೇಳಿಸಿತು. ಆ ಕ್ಷಣದಲ್ಲೇ... ಹೌದು, ಅದೇ ಕ್ಷಣದಲ್ಲಿ ಎನ್ನಬಹುದು... ಏಕೆಂದರೆ, ಅವನಿನ್ನೂ ಕರೆಗಂಟೆಯಿಂದ ಬೆರಳನ್ನು ಹೊರತೆಗೆದಿರಲಿಲ್ಲ. ಬಾಗಿಲು ತೆರೆದುಕೊಂಡು ಒಬ್ಬ ಮುದುಕಿ ಅವನ ಎದುರಿಗೆ ಪ್ರತ್ಯಕ್ಷಳಾದಳು.

ಸಾಮಾನ್ಯವಾಗಿ ಕರೆಗಂಟೆ ಒತ್ತಿದ ಎಷ್ಟೋ ಹೊತ್ತಿನ ನಂತರ ಬಾಗಿಲು ತೆರಯುತ್ತದೆ. ಆದರೆ ಇಲ್ಲಿ ಮುದುಕಿ ಕರೆಗಂಟೆ ಒತ್ತುವುದಕ್ಕೇ ಕಾಯುತ್ತಿರುವಂತೆ ಬಾಗಿಲಲ್ಲೇ ನಿಂತಿದ್ದವಳಂತೆ ಕಾಣಿಸಿತು. ಈ ಅನೀರಿಕ್ಷಿತ ಘಟನೆಯಿಂದ ಬಿಲ್ಲಿ ವೀವರ್ ಕೊಂಚ ವಿಚಲಿತನಾದ.

ಮುದುಕಿಗೆ ಅರವತ್ತರ ಮೇಲಾಗಿತ್ತು. ಅವನನ್ನು ನೋಡುತ್ತಿದ್ದಂತೆಯೇ ಅವಳ ಮುಖ ಊರಗಲ ಅರಳಿತು. ಅವನನ್ನು ಒಳಗೆ ಸ್ವಾಗತಿಸುತ್ತಾ,

"ಬಾ ಮಗಾ, ಬಾ ಒಳಗೆ!" ಎಂದಳು ಪಕ್ಕಕ್ಕೆ ಸರಿಯುತ್ತಾ. ಬಿಲ್ಲಿ, ಕುತ್ತಿಗೆಗೆ ಬೆಲ್ಟು ಕಟ್ಟಿದ್ದ ಮನೆ ನಾಯಿಯಂತೆ ಒಳಗೆ ನಡೆದ.

"ಕಿಟಕಿಯ ಮೇಲಿದ್ದ ಫಲಕ ನನ್ನನ್ನು ಇಲ್ಲಿಗೆ ಸೆಳೆಯಿತು." ಎಂದ ಬಿಲ್ಲಿ.

"ಗೊತ್ತು ಮಗಾ, ಗೊತ್ತು!" ಮುದುಕಿ ಮಂದಹಾಸ ಬೀರುತ್ತಾ ಹೇಳಿದಳು.

"ನಾನು ಉಳಿದುಕೊಳ್ಳಲು ಒಂದು ಕೊಠಡಿಯನ್ನು ಹುಡುಕುತ್ತಿದ್ದೆ."

"ಏನೂ ಯೋಚ್ನೆ ಮಾಡಬೇಡ ಮಗಾ. ನಿನಗಾಗಿಯೇ ಒಂದು ಕೊಠಡಿ ತಯಾರಿದೆ." ನೀಲಿ ಕಣ್ಣಿನ ಆ ಮುದುಕಿ ವಾತ್ಸಲ್ಯದಿಂದ ಹೇಳಿದಳು. ಅವಳ ಮಂದಹಾಸ ಆ ಮುಖಕ್ಕೆ ವಿಶೇಷ ಕಳೆ ಕೊಟ್ಟಿತ್ತು.